ಮರೆಯಾದ ಭೀಮಕಾಯ



1931–2025

ಉದಯವಾಣಿ

ಗುರುವಾರ, ಸೆಪ್ಟೆಂಬರ್ 25, 2025

ಸಂಪಾದಕೀಯ

ರಾಷ್ಟ್ರೀಯ ವಿಚಾರಧಾರೆಗೆ ಭೈರಪ್ಪರಿಂದ ಜಲಪಾತದ ಓಘ

ನಾಡ ಹಬ್ಬ ದಸರಾದಲ್ಲಿ ಮೈಸೂರು ಮುಳುಗಿರುವ ಹೊತ್ತು. ಸರಸ್ವತಿಯ ಪೂಜೆಗೆ ಸನ್ನದ್ಧಗೊಳ್ಳುತ್ತಿರುವ ಮಧ್ಯೆ ಸರಸ್ವತಿಯಿಂದ ಸಮ್ಮಾನಗೊಂಡಿದ್ದ ಭಾರತೀಯ ಸಾಹಿತ್ಯ ಲೋಕದ, ಕನ್ನಡದ ದಿಟ್ಟ ಪ್ರಭಾವಶಾಲಿ ಸಾಹಿತಿ ಡಾ। ಎಸ್. ಎಲ್. ಭೈರಪ್ಪ ಅವರು ಬುಧವಾರ ಇಹಲೋಕ ತ್ಯಜಿಸಿದ್ದಾರೆ. 'ನಾನೇಕೆ ಬರೆಯುತ್ತೇನೆ ಎಂಬುದು ಪ್ರತಿ ಸೃಜನಶೀಲ ಲೇಖಕನೊಳಗೆ ಸದಾ ಇರಲೇಬೇಕಾದ ಪ್ರಶ್ನೆ ಮಾತ್ರ ಅಲ್ಲ; ಎಚ್ಚರ ಸಹ'. ಆ ಎಚ್ಚರವನ್ನು ತಮ್ಮೊಳಗೆ ಇಟ್ಟುಕೊಂಡೇ ಬದುಕಿನುದ್ದಕ್ಕೂ ಬರೆದವರು ಭೈರಪ್ಪನವರು. ಹಲವು ಮಹತ್ವದ ಕಾದಂಬರಿಗಳನ್ನು ಬರೆದು ಭಾರತೀಯ ಓದುಗರಲ್ಲಿ ಗದ್ಯದ ರುಚಿ ಹೆಚ್ಚಿಸಿದವರು.

ಎಡ–ಬಲಗಳ ನಡುವಣ ಸೈದ್ಧಾಂತಿಕ ಸಂಘರ್ಷಗಳೇನೇ ಇದ್ದರೂ ಭೈರಪ್ಪ ಅವರ ಕೃತಿ, ಲೇಖನಗಳನ್ನು ಓದದವರು ಬಲು ವಿರಳ. ಇಂತಹ ಬಲು ಅಪರೂಪದ ಸರಸ್ವತಿ ಪರಿಚಾರಕನನ್ನು ಕಳೆದುಕೊಂಡು ಕೇವಲ ಕರುನಾಡು ಮಾತ್ರವಲ್ಲ ಇಡೀ ದೇಶದ ಸಾರಸ್ವತ ಲೋಕ ಬಡವಾಗಿದೆ. ತೀರಾ ಬಡತನದ ಹಿನ್ನೆಲೆಯಲ್ಲಿ ಚನ್ನರಾಯಪಟ್ಟಣದ ಸಂತೇಶಿವರ ಎಂಬ ಹಳ್ಳಿಯಲ್ಲಿ ಹುಟ್ಟಿದ ಭೈರಪ್ಪ ಅವರು ಬೆಳೆದ ಪರಿಯೇ ಅದ್ಭುತ. ಬಡತನದ ಎಲ್ಲ ಬವಣೆ, ಸಂಕಷ್ಟಗಳನ್ನು ಜೀರ್ಣಿಸಿಕೊಳ್ಳುತ್ತಲೇ ಬದುಕನ್ನೂ ಸವಾಲಾಗಿ ತನ್ನದಾಗಿಸಿಕೊಂಡವರು. ಈ ಅನುಭವಗಳನ್ನು ತಮ್ಮ ಕಾದಂಬರಿಗಳಲ್ಲಿ ಕಟ್ಟಿ ಕೊಟ್ಟಿದ್ದಾರೆ. ಮಾನವೀಯ ಗುಣ, ಮೌಲ್ಯಗಳ ಮೇಲೆ ಬೆಳಕು ಚೆಲ್ಲುವ ಜತೆ ಜತೆಗೇ ಸಮಾಜದ ಅಂಕು ಡೊಂಕುಗಳನ್ನು ಚರ್ಚೆಯ ಮೇಜಿಗೆ ತರಲು ಪ್ರಯತ್ನಿಸಿದರು. ಆ ಕಾಲಘಟ್ಟದಲ್ಲಿ ಎಡಪಂಥೀಯ ಮತ್ತು ಬಂಡಾಯ ಸಾಹಿತ್ಯ ಪ್ರಭಾವ ಶಾಲಿಯಾಗಿದ್ದರಿಂದ ಸಹಜ ವಾಗಿಯೇ ಇವರ ಈ ನೋಟಗಳು ಕೆಲವರ ಕೆಂಗಣ್ಣಿಗೆ ಗುರಿಯಾದವು. ಇದನ್ನೂ ಸವಾಲಾಗಿಯೇ ಸ್ವೀಕರಿಸಿದ ಭೈರಪ್ಪ ತಮ್ಮ ಚಿಂತನೆಯನ್ನೇ ಆಧಾರವನ್ನಾಗಿಸಿಕೊಂಡು ಕೃತಿ ರಚಿಸಿದರು. ಆದರೆ ಅವರು ಪ್ರತಿಯೊಂದು ಕೃತಿಗೂ ಆಯ್ದುಕೊಳ್ಳುತ್ತಿದ್ದ ವಿಷಯ, ರಚನೆ, ಪಾತ್ರಗಳೆಲ್ಲವೂ ಅನನ್ಯವಾಗಿದ್ದವಷ್ಟೇ ಅಲ್ಲ; ಅಧ್ಯಯನಶೀಲವಾಗಿರುತ್ತಿದ್ದವು. ಸಮಕಾಲೀನತೆ ಅವರ ಬಹುತೇಕ ಕೃತಿಗಳಲ್ಲಿನ ಜೀವದ್ರವ್ಯ. ರಸಾಸ್ವಾದನೆ ಎಂಬುದು ಬರೀ ಕಲ್ಪನೆಯಲ್ಲೋ, ಕಾವ್ಯದಲ್ಲೋ ಎನ್ನುವಾಗ ಗದ್ಯದಲ್ಲೂ ಸಹ ಎಂದು ತಮ್ಮ ಬರೆವಣಿಗೆ ಮೂಲಕ ಸಾಬೀತು ಪಡಿಸಿದವರು. ಅದೇ ಕಾರಣಕ್ಕೆ ಭಿನ್ನ ಧ್ವನಿಗಳ ಬಗ್ಗೆ ಹೆಚ್ಚು ಯೋಚಿಸಲಿಲ್ಲ 'ನಾನೇಕೆ ಬರೆಯುತ್ತೇನೆ' ಎಂದು ಇನ್ನಷ್ಟು ಗಟ್ಟಿಯಾಗಿ ಪ್ರಚುರಪಡಿಸಿದ, ಪ್ರವಾಹದ ವಿರುದ್ಧ ಯಶಸ್ವಿಯಾಗಿ ಈಜಿ ದಡ ಸೇರಿದ ಮೇರು ಸಾಹಿತಿ. ಕನ್ನಡದ ಸಂದರ್ಭದಲ್ಲಿ ಮಂಜು ಮುಸುಕಿದಂತಿದ್ದ ರಾಷ್ಟ್ರೀಯ ವಿಚಾರ ಧಾರೆಗೆ ಜಲಪಾತದ ಓಘ ಒದಗಿಸಿದವರು ಭೈರಪ್ಪ.

ಭೈರಪ್ಪರ ಕಾದಂಬರಿಗಳು ದೇಶ–ವಿದೇಶದ ಅತ್ಯಧಿಕ ಭಾಷೆಗಳಿಗೆ ಅನುವಾದ ಗೊಂಡಿರುವುದು, ಅವರ ಎಲ್ಲ ಕೃತಿಗಳಿಗೆ ಮಾರುಕಟ್ಟೆಯಲ್ಲಿ ಎಲ್ಲಿಲ್ಲದ ಬೇಡಿಕೆ ಲಭಿಸುತ್ತಿದ್ದುದು, ಕಾದಂಬರಿಗಳನ್ನಾಧರಿಸಿದ ಕಿರು–ಬೆಳ್ಳಿ ತೆರೆಗಳಲ್ಲಿ ದೃಶ್ಯರೂಪಗಳ ಜನಪ್ರಿಯತೆ, ಇವರ ಕಾದಂಬರಿ, ಲೇಖನಗಳನ್ನು ಇಂದಿನ ಯುವ ತಲೆಮಾರೂ ಬಹುವಾಗಿ ನೆಚ್ಚಿಕೊಳ್ಳುತ್ತಿರುವುದು... ಇವೆಲ್ಲವೂ ಅವರ ಸಾಹಿತ್ಯ ಸೃಷ್ಟಿಯ ಮೇಲ್ಮೆಗೆ ಸಾಕ್ಷಿ. ಗಂಭೀರ ಸಾಹಿತ್ಯದತ್ತ ಹಲವು ತಲೆಮಾರುಗಳ ಸೆಳೆದ ಕಾದಂಬರಿಕಾರ.

ತಮ್ಮ ಕೃತಿಗಳಲ್ಲಿ ಏನನ್ನು ಪ್ರತಿಪಾದಿಸುತ್ತ ಬಂದಿದ್ದರೋ ಅದರಂತೆ ಜೀವನದಲ್ಲಿ ನಡೆದುಕೊಂಡು ಬಂದರು. ಪ್ರಶಸ್ತಿ, ಪುರಸ್ಕಾರ ಗಳಿಗೆ ಅರ್ಜಿ ಹಾಕದೆ, ಗುಂಪು ಸೃಷ್ಟಿಸಿಕೊಳ್ಳದೆ ಏಕಾಂಗಿಯಾಗಿ ಬರೆಯುತ್ತಾ ಬೆಳೆದವರು. ಭೈರಪ್ಪರನ್ನು ಸರಸ್ವತಿ ಸಮ್ಮಾನ, ಪದ್ಮಭೂಷಣದಂಥ ಪುರಸ್ಕಾರಗಳು ಅರಸಿ ಬಂದಾಗ ಅವನ್ನು ಗೌರವ ಯುತವಾಗಿ ಸ್ವೀಕರಿಸಿ, ಆ ಪ್ರಶಸ್ತಿ, ಪುರಸ್ಕಾರಗಳ ಶ್ರೇಷ್ಠತೆಯನ್ನು ಎತ್ತಿ ಹಿಡಿದಿದ್ದರು. ಸಾರಸ್ವತ ಲೋಕಕ್ಕೆ ಅತ್ಯಮೂಲ್ಯ ಕೊಡುಗೆ ನೀಡಿದ ಭೈರಪ್ಪ ಅವರಿಗೆ ದೇಶದ ಅತ್ಯುನ್ನತ ಸಾಹಿತ್ಯ ಪ್ರಶಸ್ತಿಯಾದ 'ಜ್ಞಾನಪೀಠ'ದ ಗೌರವ ಯಾಕೆ ಲಭಿಸಲಿಲ್ಲ ಎಂಬುದು ಇಂದಿಗೂ ಸಾಹಿತ್ಯ ಓದುಗರಲ್ಲಿ ಉಳಿದಿರುವ ಯಕ್ಷಪ್ರಶ್ನೆ. ಪುರಸ್ಕಾರಗಳ ಮಾತನ್ನು ಒತ್ತಟ್ಟಿಗಿರಿಸಿ ಹೇಳುವುದಿದ್ದಲ್ಲಿ ಭೈರಪ್ಪ ಅವರು ತಮ್ಮ ಕೃತಿಗಳ ಮೂಲಕವೇ ಸಾಹಿತ್ಯದ ಓದುಗರ ಮನದಲ್ಲಿ ಅಚ್ಚಳಿಯದೇ ಉಳಿಯಲಿದ್ದಾರೆ.

ತಮ್ಮ ಹೆಸರೇ ಬದಲಿಸಲು ಹೊರಟಿದ್ದ ಭೈರಪ್ಪ

ಸಂತೆ ಶಿವರದ ಭೈರಪ್ಪ ಅವರ ಒಕ್ಕಲು (ಮನೆತನ) ನಲ್ಲಿ ಮನೆಯಲ್ಲಿ ಒಬ್ಬರಿಗಾದರೂ ಭೈರಪ್ಪ ಎಂಬ ಹೆಸರಿರುವುದು ರೂಢಿಯಾಗಿತ್ತು. ಹಾಗಾಗಿ ಲಿಂಗಣ್ಣಯ್ಯ ಅವರ ಕುಟುಂಬದ ಒಬ್ಬ ಸದಸ್ಯನಿಗೆ ಭೈರಪ್ಪ ಹೆಸರು ಇಡಲಾಗಿ ನನಗೆ ಭೈರಪ್ಪ ಹೆಸರು ಬಂದಿದೆ ಎಂದೂ ಹೇಳಿಕೊಂಡಿದ್ದರು. ಆದರೆ ಈ ಹೆಸರು ಭೈರಪ್ಪಗೆ ಇಷ್ಟ ಇರಲಿಲ್ಲ. ಅದನ್ನು ಬದಲಿಸಬೇಕೆಂದು ಅವರು ಪ್ರಯತ್ನಪಟ್ಟಿದ್ದರಂತೆ. ನೋಟರಿ ಬಳಿ ಹೋಗಿ ವಿಚಾರಿಸಿದ್ದರು. ಆದರೆ ಅವರಿಗೆ ಶುಲ್ಕ ಕೊಡಲು ಹಣವಿಲ್ಲದೆ ಸುಮ್ಮನಾಗಿದ್ದರಂತೆ. ಇನ್ನೊಮ್ಮೆ ಅವರ ಮೇಷ್ಟ್ರೊಬ್ಬರು, ಹೆಸರಲ್ಲೇನಿದೆ, ನಿನ್ನ ಕೆಲಸದಿಂದ ಹೆಸರನ್ನು ಶಾಶ್ವತಗೊಳಿಸುವ ಎಂದು ಬುದ್ಧಿವಾದ ಹೇಳಿದ್ದರಂತೆ.

ಇಂದಿನ ಪಂಚಾಂಗ ದಿನ ಭವಿಷ್ಯ

ಅದೃಷ್ಟ ಸಂಖ್ಯೆ: 7
•ಜಯತೀರ್ಥ ಆಚಾರ್ಯ

■ ವಿಶ್ವಾವಸು ಸಂ।ರದ ಕನ್ಯಾ ಮಾಸ ದಿನ 9 ಸಲುವ ಆಶ್ವಯುಜ ಶುದ್ಧ ತದಿಗೆ 2 ಗಳಿಗೆ
■ ಮಹಾನಕ್ಷತ್ರ: ಉತ್ತರಾ ■ ನಿತ್ಯನಕ್ಷತ್ರ: ಸ್ವಾತಿ 32 ಗಳಿಗೆ ■ ಋತು: ಶರದೃತು
■ ರಾಹುಕಾಲ: 1.30–3.00 ಗಂಟೆ ■ ಗುಳಿಕಕಾಲ: 9.00–10.30 ಗಂಟೆ

ಮೇಷ ದೇವಿಯ ಅನುಗ್ರಹದಿಂದ ಮಾಯವಾದ ವಿಪತ್ತುಗಳು! ಉದ್ಯೋಗ, ವ್ಯವಹಾರ ರಂಗಗಳಲ್ಲಿ ಯಶಸ್ಸು, ಕಿರಿಯ ಸಹೋದ್ಯೋಗಿಗಳಿಂದ ಮಾರ್ಗದರ್ಶನ ಯಾಚನೆ. ಮನೆಯಲ್ಲಿ ಎಲ್ಲರ ಆರೋಗ್ಯ ಉತ್ತಮ.

ವೃಷಭ ವ್ಯವಹಾರಸ್ಥರಿಗೆ ದೇವಿಯ ವಿಶೇಷ ಅನುಗ್ರಹ. ಹಣಕಾಸು ವ್ಯವಹಾರ ಸುಗಮ. ಪ್ರಭಾವಿ ವ್ಯಕ್ತಿಗಳೊಂದಿಗೆ ಹೊಸದಾಗಿ ಸಂಪರ್ಕ ಸಾಧ್ಯತೆ. ಸರಕಾರಿ ನೌಕರರಿಗೆ ವರ್ಗಾವಣೆಯ ಸೂಚನೆ. ಮನೆಯಲ್ಲಿ ನೆಮ್ಮದಿ.

ಮಿಥುನ ಗುರುದೇವತಾನುಗ್ರಹದಿಂದ ವಿಘ್ನಗಳ ನಿವಾರಣೆ. ಉದ್ಯೋಗಸ್ಥರಿಗೆ ನಿರಾತಂಕ. ವ್ಯವಹಾರಸ್ಥರಿಗೆ ದಾರಿ ಸುಗಮ. ಆತ್ಮವಿಶ್ವಾಸ, ಭಗವತ್ಪ್ರೇಮ ದಿಂದ ನಿಶ್ಚಿಂತೆಯ ಪರಿಸ್ಥಿತಿ. ಹಿರಿಯರ ಆರೋಗ್ಯ ವಿಚಾರಿಸಿ.

ಕರ್ಕ ಕನಿಷ್ಠ ಪ್ರಯತ್ನದಿಂದ ಗರಿಷ್ಠ ಲಾಭ ಹೊಂದುವಿರಿ. ಉದ್ಯೋಗಸ್ಥರಿಗೆ ತಕ್ಕಮಟ್ಟಿಗೆ ನೆಮ್ಮದಿಯ ಅನುಭವ. ಪಾಲುದಾರಿಕೆ ವ್ಯವಹಾರ ಕುಂಠಿತ. ಕೃಷಿಕರಿಗೆ ಸಾಮಾನ್ಯ ತೃಪ್ತಿಯ ಸನ್ನಿವೇಶ. ಗೃಹಿಣಿಯರಿಗೆ ಹರ್ಷ.

ಸಿಂಹ ತಾತ್ಕಾಲಿಕ ವಿಘ್ನಗಳನ್ನು ಬದಿಗೆ ಸರಿಸಿ ಯಶಸ್ಸಿನತ್ತ ದಾಪುಗಾಲು. ಸ್ವಯಂ ಉದ್ಯೋಗಸ್ಥರಿಗೆ ಶುಭದಿನ. ಉಡುಪು ತಯಾರಿ ಉದ್ದಿಮೆಯವರಿಗೆ ಅಪಾರ ಲಾಭ. ಹಿರಿಯರ ಯೋಗಕ್ಷೇಮ ವಿಚಾರಿಸಿ.

ಕನ್ಯಾ ಅನಿರೀಕ್ಷಿತ ಧನಲಾಭ. ಹಿರಿಯರ ಮಾರ್ಗದರ್ಶನದ ಲಾಭ. ಉದ್ಯೋಗಸ್ಥರಿಗೆ ಮೇಲಧಿಕಾರಿಗಳ ಪ್ರೋತ್ಸಾಹ. ವ್ಯವಹಾರಸ್ಥರಿಗೆ ಹೊಸ ಅವಕಾಶಗಳು ಲಭ್ಯ. ಅವಿವಾಹಿತರಿಗೆ ಯೋಗ್ಯ ನೆಂಟಸ್ತಿಕೆ ಸಾಧ್ಯತೆ.

ತುಲಾ ಉದ್ಯೋಗ ಕ್ಷೇತ್ರದಲ್ಲಿ ಹೆಚ್ಚುವರಿ ಜವಾಬ್ದಾರಿ. ವ್ಯವಹಾರಸ್ಥರಿಗೆ ಶುಭ. ಕೃಷಿ ಉತ್ಪನ್ನ ಮಾರಾಟಗಾರರಿಗೆ ಲಾಭ. ಪಾಲುದಾರಿಕೆ ವ್ಯವಹಾರದಲ್ಲಿ ಪಾರದರ್ಶಕತೆ ಇರಲಿ. ಸಾಮೂಹಿಕ ಪೂಜೆ, ಪಾರಾಯಣದಲ್ಲಿ ಭಾಗಿ.

ವೃಶ್ಚಿಕ ದಿನವಿಡೀ ಆನಂದದ ಅನುಭವ. ಅಪೇಕ್ಷಿತ ಕಾರ್ಯಗಳು ನಿಮ್ಮ ನಿರೀಕ್ಷೆಯ ಪ್ರಕಾರ ನೆರವೇರುವ ಸಾಧ್ಯತೆ. ಹತ್ತಿರದ ಬಂಧುಗಳ ಆಗಮನದಿಂದ ಸಡಗರ. ಆಸ್ತಿ ಖರೀದಿ, ಮಾರಾಟ ಮಾತುಕತೆಯಲ್ಲಿ ಪ್ರಗತಿ.

ಧನು ಕಾರ್ಯನಿಷ್ಠೆಯಿಂದ ಯಶಸ್ಸು, ಸಹೋದ್ಯೋಗಿಗಳ ಅಸೂಯೆಗೆ ಗುರಿಯಾಗದಂತೆ ಎಚ್ಚರ ವಹಿಸಿ. ದೇವತಾರ್ಚನೆಯಲ್ಲಿ ಆಸಕ್ತಿ.ಉತ್ತರ ದಿಕ್ಕಿನಲ್ಲಿ ಪ್ರಯಾಣ ಸಂಭವ. ದೇವಾಲಯದ ಉತ್ಸವದಲ್ಲಿ ಭಾಗಿ.

ಮಕರ ಸಮಸ್ಯೆಗಳ ಕುರಿತು ಚಿಂತಿಸಲು ಸಮಯವಿಲ್ಲದಷ್ಟು ಕೆಲಸಗಳು. ಮನೆ ಮಂದಿಯ ಸಹಕಾರ, ಪ್ರೋತ್ಸಾಹ ಉತ್ತಮ. ಮಕ್ಕಳ ಭವಿಷ್ಯ ಚಿಂತನೆ, ಸಮಾಧಾನ ಗೋಚರ. ಪಾಲುದಾರಿಕೆ ವ್ಯವಹಾರಸ್ಥರಿಗೆ ಕೊಂಚ ಹಿನ್ನಡೆ.

ಕುಂಭ ಸಾಮಾಜಿಕ ಚಟುವಟಿಕೆಗಳನ್ನು ನೀವಾಗಿ ಹೆಚ್ಚಿಸಿಕೊಳ್ಳುವಿರಿ. ಸಮಾಜದಲ್ಲಿ ಗೌರವದ ಸ್ಥಾನ ಲಭ್ಯ. ಉದ್ಯೋಗ ರಂಗದಲ್ಲಿ ಹೆಚ್ಚು ಯಶಸ್ಸಿಗೆ ಪಾತ್ರರಾಗುವಿರಿ. ನಿವೃತ್ತರಿಗೆ ವಿಶೇಷ ಮನೋರಂಜನೆಯ ಸನ್ನಿವೇಶ.

ಮೀನ ಮೀನು ನೀರಿನಲ್ಲಿ ಓಡಾಡಿದಷ್ಟು ಚುರುಕಿನಿಂದ ಚಟುವಟಿಕೆಗಳ ನಿರ್ವಹಣೆ. ಕಾರ್ಯತತ್ಪರತೆಗೆ ಸವಾಲು ಹಾಕುವ ಸನ್ನಿವೇಶ. ದೇವತಾ ಪ್ರಾರ್ಥನೆಯಿಂದ ಯಶಸ್ಸು ಲಭ್ಯ. ಸಂಗಾತಿಯಿಂದ ಉತ್ತಮ ಸಹಕಾರ.

ಕನ್ನಡ ಸಾಹಿತ್ಯ ಲೋಕದ ಭೀಮಕಾಯ ಭೈರಪ್ಪ ತಮ್ಮ ಬದುಕಿನ ಪರ್ವ ಮುಗಿಸಿ ದೂರ ಸರಿದಿದ್ದಾರೆ. ರಾಷ್ಟ್ರೀಯ ಚಿಂತನೆಗೇ ಬದುಕನ್ನು ಸಮರ್ಪಿಸಿಕೊಂಡ ಅವರ ಬದುಕೇ ಒಂದು ಮಹಾಯಜ್ಞ. ಆ ಯಜ್ಞದ ಅಗ್ನಿಗೆ ತಮ್ಮನ್ನು ಒಡ್ಡಿಕೊಂಡು ಮತ್ತಷ್ಟು ಮತ್ತಷ್ಟು ಪಕ್ವತೆಯನ್ನು ಮೈಗೂಡಿಸಿಕೊಂಡ ಭೈರಪ್ಪ ಕನ್ನಡ ಸಾಹಿತ್ಯ ಲೋಕದ ಧ್ರುವತಾರೆಯಾಗಿ ಮಿನುಗಿದ್ದಾರೆ.

ಬಡತನದಲ್ಲೇ ಬೆಂದು ಅರಳಿದ ಭೈರಪ್ಪ



ಕಿತ್ತು ತಿನ್ನುವ ಬಡತನ | ಬಾಲ್ಯದಲ್ಲೇ ಅಮ್ಮನ ಕಳಕೊಂಡು ಅನಾಥ | ಕಣ್ಣೆದುರೇ ಪ್ಲೇಗ್‌ಗೆ ಸೋದರ, ಸೋದರಿಯರ ಬಲಿ
ನೋವಿನಲ್ಲೇ ಬದುಕಿನ ವಿಶ್ವರೂಪ ಕಂಡ ವಿದ್ವಾಂಸ | ಹಸಿವಿನ ಬೇನೆಯಿಂದಲೇ ಚಿಂತಕ, ಸಾಹಿತಿಯಾಗಿ ಹೊರಹೊಮ್ಮಿದ ಭೈರಪ್ಪ

ಕನ್ನಡ ನಾಡಿನ ಸಾರಸ್ವತ ಲೋಕದ ಉತ್ತುಂಗತೆ ಮುಟ್ಟಿರುವ ಸಂತೆಶಿವರ ಭೈರಪ್ಪ ಬಡತನದಲ್ಲಿ ಬೆಂದು ಅರಳಿದ ಹೂವು. ಜೀವನದಲ್ಲಿ ಸಂಕಷ್ಟದ ಹಲವು ಮಜಲುಗಳನ್ನು ಅನುಭವಿಸಿರುವ ಭೈರಪ್ಪ ತಮ್ಮ ವಿದ್ಯಾರ್ಥಿ ಜೀವನದಲ್ಲಿ ವಾರಾನ್ನ ಉಂಡು ಬದುಕನ್ನು ಅರಳಿಸಿಕೊಂಡವರು. ಕಠಿಣ ನಿಲುವಿನ, ಚಿಂತನೆಯಲ್ಲಿ ಸ್ಪಷ್ಟತೆ ಇದ್ದ ಆಳವಾದ ಜ್ಞಾನದ ಹರವನ್ನು ಹೊಂದಿದ್ದ ಭೈರಪ್ಪ ಅವರ ವ್ಯಕ್ತಿತ್ವ ರೂಪುಗೊಳ್ಳಲು ವರು ಬದುಕಿನಲ್ಲಿ ಕಂಡ ನೋವುಗಳೇ ಕಾರಣ ಎನ್ನುವುದರಲ್ಲಿ ಅತಿಶಯೋಕ್ತಿ ಇಲ್ಲ

- ಜನನ: ಆಗಸ್ಟ್ 20, 1931
- ಸ್ಥಳ: ಸಂತೇಶಿವರ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ.
- ವ್ಯಾಸಂಗ: ಎಂ.ಎ. ಎಂ.ಎ. (ಮೈಸೂರು ವಿಶ್ವವಿದ್ಯಾಲಯ)
- ಹುದ್ದೆ: ಉಪನ್ಯಾಸಕ
- 1958: ಕಾಡಸಿದ್ದೇಶ್ವರ ಕಾಲೇಜು, ಹುಬ್ಬಳ್ಳಿ
- 1966: ಸರ್ದಾರ್ ವಲ್ಲಭ ಭಾಯಿ ಪಟೇಲ್ ವಿಶ್ವವಿದ್ಯಾಲಯ, ಗುಜರಾತ್
- 1971: ರಾಷ್ಟ್ರೀಯ ಶಿಕ್ಷಣ ಮತ್ತು ತರಬೇತಿ ಶಿಕ್ಷಣ ಸಂಸ್ಥೆ, ದೆಹಲಿ
- 1991: ಮೈಸೂರಿನ ಪ್ರಾದೇಶಿಕ ಶಿಕ್ಷಣ ಕಾಲೇಜಿನಲ್ಲಿ ಅಧ್ಯಾಪಕ, ಅಲ್ಲಿದ್ದಾಗಲೇ ನಿವೃತ್ತಿ

ಮೂಲತಃ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕಿನ ಸಂತೆಶಿವರದವರಾಗಿದ್ದು, ಲಿಂಗಣ್ಣಯ್ಯ – ಗೌರಮ್ಮ ದಂತಿಯ ಮೂವರು ಮಕ್ಕಳಲ್ಲಿ ಭೈರಪ್ಪ ಒಬ್ಬರು. ಕಳೆದ ಐದು ದಶಕಗಳಿಂದ ಮೈಸೂರಿನಲ್ಲಿ ನೆಲೆನಿಂತಿದ್ದರು. ಸಂತೇಶಿವರದಲ್ಲಿ 26-07-1934 ರಂದು ಹುಟ್ಟಿದ ಭೈರಪ್ಪನವರು ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಿನಲ್ಲೇ ಪಡೆದರು. ವಾಸ್ತವದಲ್ಲಿ ಭೈರಪ್ಪನವರು ಉಂಡಂಥ ಕಹಿ ಯಾರ ಕರುಳನ್ನೂ ಹಿಂಡಬ ಲ್ಲುದು. ಚನ್ನರಾಯಪಟ್ಟಣ ತಾಲೂಕಿನ ಸಂತೇಶಿವರ ಎಂಬ ಪುಟ್ಟ ಕುಗ್ರಾಮ. ಅದು, ಎಸ್.ಎಲ್. ಭೈರಪ್ಪನವರನ್ನು ಚಿಂತೆ- ಚಿಂತನೆಗಳ ತೊಟ್ಟಿಲಲ್ಲಿ ತೂಗಿಟ್ಟು ಸಾಕಿದ ಹುಟ್ಟೂರು. ಅಲ್ಲಿ ಜಗತ್ತನ್ನು ಪಿಳಿಪಿಳಿ ನೋಡು ವಾಗಲೇ, ಬದುಕು ಸಕಲ ಸಂಕಷ್ಟಗಳ ವಿಶ್ವರೂಪ ದರ್ಶನ ಮಾಡಿಸಿತ್ತು. ಕಿತ್ತು ತಿನ್ನುವ ಬಡತನ, ಬೇಜವಾಬ್ದಾರಿ ತಂದೆ, ಪ್ಲೇಗ್ ಮಾರಿಯಿಂದ ತತ್ತರಗೊಂಡ ಪರಿಸರದಲ್ಲೂ ಅವರ ಸಣ್ಣವಯಸ್ಸಿನಲ್ಲೇ ಅವರ ತಾಯಿಯ ಧೀಮಂತಿಕೆಯನ್ನು ಮೈಗೂಡಿಸಿಕೊಂಡಿದ್ದರು.

5ನೇ ವಯಸ್ಸಿನಲ್ಲಿರುವಾಗಲೇ ಅವರ ತಾಯಿ ಪ್ಲೇಗ್‌ಗೆ ತುತ್ತಾದರು. ಈ ವೇಳೆ ಊರಿನಲ್ಲಿವಾರನ್ನದ ಮೂಲಕ ಜೀವನ ನಡೆಸಿದ ಅವರು, ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿದರು. 13ನೇ ವಯಸ್ಸಿನಲ್ಲಿ ಮಹಾತ್ಮ ಗಾಂಧೀಜಿಯವರ ಮೌಲ್ಯಗಳಿಗೆ ಬೆಲೆ ಕೊಟ್ಟು ಸ್ವಾತಂತ್ರ ಚಳವಳಿಗೆ ಧುಮುಕಿದ್ದರು.

ಸಂಕಷ್ಟದಲ್ಲೂ ಓದೂ ಓದು

ಹಸಿವಿತ್ತು. ಬಡತನವಿತ್ತು. ಕಣ್ಣ ಮುಂದೆ ನೋವುಗಳೇ ಜೀಕುತ್ತಿದ್ದವು, ನಿಜ. ಹೀಗಿದ್ದರೂ, ಓದಿನ ದೀಪ ಹಚ್ಚಿಕೊಂಡೇ ತಾರುಣ್ಯ ಕಟ್ಟಿದ್ದರು ಭೈರಪ್ಪ. ಅವರು ಅಗರಬತ್ತಿಯ ಸೇಲ್ಸ್ ಮ್ಯಾನ್ ಆಗಿದ್ದಾಗ, ಬ್ಯಾಗಿನಲ್ಲಿ ಪುಸ್ತಕಗಳೇ ತುಂಬಿಕೊಂಡಿದ್ದವು. 'ಬಸ್ಸಿಗೆ ಕಾಯುವಾಗ, ಬಸ್ಸಿನಲ್ಲಿ ಕೂತಾಗ, ಕೂರಲು ಜಾಗವಿಲ್ಲದೆ ನಿಂತಾಗಲೂ, ಒಂದು ಕೈಲಿ ಕಂಬವನ್ನೋ, ಪಕ್ಕದ ಸೀಟಿನ ಹಿಡಿಯನ್ನೋ ಹಿಡಿದು, ಇನ್ನೊಂದು ಕೈಲಿ ಪುಸ್ತಕ ಹಿಡಿದು ಓದುತ್ತಿದ್ದೆ. ಈ ವ್ಯಾಪಾರವು ನನಗೆ ಅಂಟದೆ, ತನಗೆ ತಾನೆ ನಡೆಯುವ ಕರ್ಮ ಅಂತಲೇ ಭಾವಿಸಿದ್ದೆ' ಎಂದು ಅವರೇ ಹೇಳುತ್ತಿದ್ದರು. ಎಲ್ಲೋ ಬೀದಿಯಲ್ಲಿ ಮಲಗಿ, ಮೊಂಬತ್ತಿ ಹಚ್ಚಿಕೊಂಡು, ರಾತ್ರಿಯಿಡೀ ಓದುತ್ತಾ ಕುಳಿತಿರುತ್ತಿದ್ದರಂತೆ. ಉನ್ನತ ಶಿಕ್ಷಣದ ಮಹದಾಸೆಯನ್ನಿಟ್ಟುಕೊಂಡು ಮೈಸೂರಿಗೆ ಬಂದ ಭೈರಪ್ಪನವರು ಶಾರದಾವಿಲಾಸ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದರು. ಬಳಿಕ ಮಹಾರಾಜ ಕಾಲೇಜಿನಲ್ಲಿ ಪದವಿ ಶಿಕ್ಷಣ ಹಾಗೂ ಮೈಸೂರು ವಿವಿಯಿಂದ ಎಂ.ಎ. ಪದವಿಯನ್ನು ಪಡೆದುಕೊಂಡಿದ್ದರು. ಬರೋ ಡಾದ ಮಹಾರಾಜ ಸಯ್ಯಾಜಿರಾವ್ ವಿಶ್ವವಿದ್ಯಾಲಯದಿಂದ ಸತ್ಯ ಮತ್ತು ಸೌಂದರ್ಯ ಎಂಬ ಇಂಗ್ಲೀಷ್ ಮಹಾ ಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಗಳಿಸಿದ ಅವರು, ವೃತ್ತಿ ಜೀವನದಲ್ಲಿಯೂ ಹಲವು ಹುದ್ದೆಗಳನ್ನು ನಿರ್ವಹಿಸಿದ್ದಾರೆ. ಸರಸ್ವತಿ ಅವರನ್ನು ವಿವಾಹವಾದ ಇವರಿಗೆ ಇಬ್ಬರು ಪುತ್ರರು. ಪುತ್ರ ಉದಯಶಂಕರ್ ಅವರು ಮೈಸೂರಿನ ಎನ್‌ಐಇ ಕಾಲೇಜಿನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದರೆ, ಇನ್ನೊಬ್ಬ ಪುತ್ರ ರವಿಶಂಕರ್ ಲಂಡನ್‌ನಲ್ಲಿ ಉದ್ಯೋಗಿಯಾಗಿದ್ದಾರೆ. ಹುಬ್ಬಳ್ಳಿಯ ಕಾಡುಸಿದ್ದೇಶ್ವರ ಕಾಲೇಜಿನಿಂದ ಹಿಡಿದು ದೆಹಲಿಯ ರಾಷ್ಟ್ರೀಯ ಶಿಕ್ಷಣ ಮತ್ತು ತರಬೇತಿ ಶಿಕ್ಷಣ ಸಂಸ್ಥೆ ತನಕ ವಿವಿಧೆಡೆ ಕೆಲಸ ಮಾಡಿದರು. ಬಳಿಕ 1972ರಲ್ಲಿ ಮೈಸೂರಿಗೆ ಬಂದ ಅವರು, ಮೈಸೂರಿನ ಪ್ರಾದೇ